**2023ರ ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಅವರ ಪ್ರಣಾಳಿಕೆಯಲ್ಲಿ ಸೇರಿಸಲು ಮಕ್ಕಳ ಹಕ್ಕೊತ್ತಾಯಗಳು**

**ಸಲ್ಲಿಕೆ: ಉಡುಪಿ ಜಿಲ್ಲೆಯ ವಿವಿಧ ಮಕ್ಕಳ ಸಂಘದವರು**

ಸೌಕರ್ಯಕಾರಿಕೆ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಉಡುಪಿ ತಾಲೂಕಿನಲ್ಲಿ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ - ನಮ್ಮ ಭೂಮಿ ಸಂಸ್ಥೆಯ ಸಹಕಾರದೊಂದಿಗೆ ನಾವು ಮಕ್ಕಳ ಸಂಘ ಮಾಡಿಕೊಂಡಿದ್ದೇವೆ. ನಾವು ಸಂಘಗಳಲ್ಲಿ ಆಟೋಟ, ಕಲಿಕೆ, ಚರ್ಚೆ, ಮಾಹಿತಿ ಪಡೆಯುವುದು, ನಮ್ಮ ಕೌಶಲ್ಯ ಪ್ರದರ್ಶಿಸುವುದರ ಜೊತೆಗೆ, ನಮ್ಮ ವಿಷಯಗಳು, ಸಮಸ್ಯೆಗಳನ್ನೂ ಸಹ ಚರ್ಚಿಸುತ್ತೇವೆ. ನಮ್ಮ ಸಮಸ್ಯೆಗಳಿಗೆ ಎಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದೂ ಸಹ ಚರ್ಚೆ ಮಾಡುತ್ತೇವೆ. ಮಕ್ಕಳ ಗ್ರಾಮ ಸಭೆ, ತಾಲೂಕು ಜಿಲ್ಲಾಡಳಿತಗಳೊಂದಿಗೆ ನಮ್ಮ ವಿಷಯಗಳನ್ನು ಅನೇಕ ಬಾರಿ ಚರ್ಚಿಸಿ ಕೆಲವು ವಿಷಯಗಳಿಗೆ ಪರಿಹಾರಗಳನ್ನು ಕಂಡುಕೊಂಡಿದ್ದೇವೆ. ನಾವು ಚರ್ಚಿಸಿದ ಕೆಲವು ವಿಷಯಗಳಿಗೆ ರಾಜ್ಯ ಮಟ್ಟದಲ್ಲಿ ಪರಿಹಾರ ಯೋಜನೆ ಮಾಡಬೇಕು. ನಮ್ಮ ರಾಜ್ಯ ಕರ್ನಾಟಕದಲ್ಲಿ ಈಗ ವಿಧಾನಸಭೆ ಚುನಾವಣೆ ಘೋಷಣೆಯಾಗಿದೆ. ಹೀಗಾಗಿ ಮುಂದೆ ನಮ್ಮ ರಾಜ್ಯ ಸರ್ಕಾರ ರಚಿಸಲು ಚುನಾವಣೆಗೆ ನಿಂತಿರುವ ನಮ್ಮ ಕ್ಷೇತ್ರದ ಅಭ್ಯರ್ಥಿಗಳೊಂದಿಗೆ ಇಂತಹ ವಿಷಯಗಳನ್ನು ಚರ್ಚಿಸುವುದು ಮುಖ್ಯ. **ಇದಕ್ಕಾಗಿ ನಮ್ಮ ಮಕ್ಕಳ ಸಂಘಗಳ ಪ್ರತಿನಿಧಿಗಳಾಗಿ ವಿವಿಧ ಪಂಚಾಯತ್‌ಗಳಿಂದ ಸುಮಾರು 150 ಮಕ್ಕಳಾದ ನಾವು, ದಿನಾಂಕ 18-04-2023ರಂದು ಒಟ್ಟಾಗಿ ಸೇರಿ ಚರ್ಚೆ ಮಾಡಿ ನಮ್ಮೆಲ್ಲ ಮಕ್ಕಳ ಪರವಾಗಿ ಈ ಕೆಳಗಿನ ನಮ್ಮ ವಿಷಯಗಳನ್ನು ನಿಮ್ಮ ಮುಂದೆ ಮಂಡಿಸುತ್ತಿದ್ದೇವೆ. ಇದನ್ನು ಎಲ್ಲ ಪಕ್ಷದ ಅಭ್ಯರ್ಥಿಗಳು ಮಕ್ಕಳ ಪ್ರಮುಖ ವಿಷಯವಾಗಿ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕು ಎಂಬುದು ನಮ್ಮ ಆಶಯ.** ಈ ಚರ್ಚೆಗೆ ನಮಗೆ ಸಹಕರಿಸಿದವರು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ - ನಮ್ಮ ಭೂಮಿ ಸಂಸ್ಥೆ, ಉಡುಪಿ ಜಿಲ್ಲೆ.

***ಶಾಲೆಗೆ ಹೋಗುವ ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಹಕ್ಕೊತ್ತಾಯಗಳು:***

- ೮ನೇ ತರಗತಿಯಲ್ಲಿರುವ ನಮ್ಮಂತಹ ಸರ್ಕಾರಿ ಶಾಲೆಗೆ ಹೋಗುವ ಮಕ್ಕಳಿಗೆ ಶಾಲೆಗೆ ಹೋಗಲು ಕೊಡುತ್ತಿರುವದನ್ನು ನಿಲ್ಲಿಸಿದ್ದಾರೆ. ಇದರಿಂದ ಸರಿಯಾದ ಪ್ರಯಾಣದ ವ್ಯವಸ್ಥೆಯಿಲ್ಲದ ಪ್ರದೇಶಗಳಿಂದ ಬರುವವರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ನಮ್ಮಂತಹ ಮಕ್ಕಳಿಗೆ ಸೈಕಲ್ ಕೊಡುವ ಯೋಜನೆಯನ್ನು ಪುನಃ ಪ್ರಾರಂಭಿಸಬೇಕು.
- ನಮಗೆ ಸರ್ಕಾರಿ ಶಾಲೆಯಲ್ಲಿ ನೀಡುವ ಉಚಿತ ಪುಸ್ತಕಗಳು, ಸಮವಸ್ತ್ರವು ಶಾಲೆ ಆರಂಭವಾಗಿ ಕೆಲವು ತಿಂಗಳು ಕಳೆದ ನಂತರ ಬರುತ್ತದೆ. ವಿಧ್ಯಾರ್ಥಿ ವೇತನವು ಸರಿಯಾದ ಸಮಯಕ್ಕೆ ಸಿಗದೇ ಶೈಕ್ಷಣಿಕ ವರ್ಷ ಮುಗಿಯುವ ಸಮಯದಲ್ಲಿ ಬರುತ್ತದೆ. ಇದರಿಂದ ನಮ್ಮ ಕಲಿಕೆಗೆ ತೊಂದರೆಯಾಗುತ್ತದೆ. ಇದನ್ನು ಶಾಲಾ ಆರಂಭದ ಸಮಯದಲ್ಲಿಯೇ ಸಿಗುವಂತಾಗಬೇಕು.
- ನಮಗೆ ಹಾಗೂ ನಮ್ಮಂತಹ ಎಲ್ಲಾ ಮಕ್ಕಳು ಹೋಗುವ ಸರ್ಕಾರಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು.
- ಎಲ್ಲಾ ಸರ್ಕಾರಿ ಶಾಲೆಗಳ ಅಕ್ಕ ಪಕ್ಕದಲ್ಲಿ ಮಾದಕ ವಸ್ತುಗಳ ಬಳಕೆ ಹಾಗೂ ಮಾರಾಟವನ್ನು ನಿರ್ಬಂಧ ಮಾಡಬೇಕು ಹಾಗೂ ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್ ವ್ಯವಸ್ಥೆ ಮಾಡಬೇಕು.
- ನಮಗೆ ಆಟವಾಡಲು, ನಮ್ಮ ಎಲ್ಲ ಸರ್ಕಾರಿ ಶಾಲೆಗಳಿಗೆ ಸಾಕಷ್ಟು ಕ್ರೀಡಾ ಸಾಮಗ್ರಿಗಳು, ಆಟದ ಮೈದಾನದ ವ್ಯವಸ್ಥೆ ಬೇಕು. ಕ್ರೀಡೆಯಲ್ಲಿ ಆಸಕ್ತಿ ಇರುವ ಮಕ್ಕಳಿಗೆ ಕ್ರೀಡೆಯಲ್ಲಿ ಹೆಚ್ಚಿನ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕು. ಅಲ್ಲದೇ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು.
- ನಮಗೆ ಅನೇಕ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಇದೆ. ಹೀಗಾಗಿ ಶಾಲೆಗಳಲ್ಲಿ ರಂಗಮಂದಿರಗಳ ವ್ಯವಸ್ಥೆ ಬೇಕು.
- ನಮ್ಮ ಸರ್ಕಾರಿ ಶಾಲೆಗಳಲ್ಲಿ ನಮಗೆ ಕಲಿಯಲು ಕಂಪ್ಯೂಟರ್ ವ್ಯವಸ್ಥೆ ಮಾಡಿಕೊಡಬೇಕು. ಹಾಗೂ ನಮಗೆ ಹೆಚ್ಚಿನ ಕಂಪ್ಯೂಟರ್ ಶಿಕ್ಷಣ ಶಾಲೆಯಲ್ಲಿಯೇ ಸಿಗುವಂತಾಗಬೇಕು. ಅಲ್ಲದೇ ಈ ಕಂಪ್ಯೂಟರ್‌ಗಳಲ್ಲಿ ನಮಗೆ ಉಪಯೋಗವಾಗುವ ಡಿಜಿಟಲ್ ಪುಸ್ತಕಗಳು, ಕಲಿಕಾ ಸಾಮಗ್ರಿಗಳನ್ನು ಅಳವಡಿಸಬೇಕು.
- ನಮಗೆ ಎಲ್ಲ ಶಾಲೆಗಳಲ್ಲಿಯೂ ಸುಸಜ್ಜಿತ ಪ್ರಯೋಗಾಲಯದ ವ್ಯವಸ್ಥೆ ಆಗಬೇಕು. ಇದರಿಂದ ವಿಜ್ಞಾನವನ್ನು ಆಸಕ್ತಿಯಿಂದ ಕಲಿಯಲು ನಮಗೆ ಸಹಕಾರಿಯಾಗುತ್ತದೆ,
- ಎಲ್ಲಾ ಶಾಲೆಗಳಲ್ಲಿಯೂ ನಮಗೆ ತುರ್ತು ಸಂಧರ್ಭದಲ್ಲಿ ಅಗತ್ಯವಿರುವ ಪ್ರಥಮ ಚಿಕಿತ್ಸೆಯ ವ್ಯವಸ್ಥೆಯನ್ನು ಕಲ್ಪಿಸಬೇಕು. ಅದರ ಬಗ್ಗೆ ಸೂಕ್ತವಾದ ಮಾಹಿತಿ ಕಾರ್ಯಕ್ರಮ, ತರಬೇತಿಗಳು ನಡೆಯಬೇಕು.

- ನಮಗೆ ಶಾಲೆಯಲ್ಲಿ ಆರೋಗ್ಯ ತಪಾಸಣೆ ನಡೆಸುವಾಗ ಕೇವಲ ಎತ್ತರ ಮತ್ತು ತೂಕವನ್ನಷ್ಟೇ ನೋಡುತ್ತಾರೆ, ನಮ್ಮಲ್ಲಿ ಅನೇಕ ಮಕ್ಕಳಿಗೆ ಅಶಕ್ತತೆ ಇದೆ. ಹೀಗಾಗಿ ಪೌಷ್ಟಿಕಾಂಶದ ತಪಾಸಣೆಯೂ ಆಗಬೇಕು. ಹಾಗೂ ಅಗತ್ಯ ಇರುವವರಿಗೆ ಪೌಷ್ಟಿಕ ಆಹಾರ ನೀಡುವಂತಾಗಬೇಕು. ನಮಗೆ ಎಲ್ಲ ಮಕ್ಕಳಿಗೂ ಎತ್ತರ ಹಾಗೂ ತೂಕ ನೋಡಿದಂತೆ, ಮಾನಸಿಕ ಒತ್ತಡ ಇದ್ದರೆ ಅದನ್ನು ನಿವಾರಿಸಲು ಸಮಾಲೋಚನೆ ನಡೆಸಬೇಕು.
- ನಮ್ಮ ಸರ್ಕಾರಿ ಶಾಲೆಯಲ್ಲಿ ಎಲ್ಲಾ ವಿಷಯಕ್ಕೂ ಶಿಕ್ಷಕರು ಬೇಕು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ, ತರಬೇತಿಗಳಿಗೆ ಅನುಗುಣವಾಗಿ ಶಿಕ್ಷಕರು ಬೇಕು.
- ಶಿಕ್ಷಣ ನಮ್ಮ ಹಕ್ಕು. ಹೀಗಿರುವಾಗ ನಮಗೆ ಸರ್ಕಾರಿ ಶಾಲೆಗಳಲ್ಲಿ ನೀಡುವ ಶಿಕ್ಷಣವು ಉಚಿತವಾಗಿದ್ದರೂ, ಕೆಲವೊಂದು ಶುಲ್ಕವನ್ನು ತೆಗೆದುಕೊಳ್ಳುತ್ತಾರೆ. ಇಂತಹ ಯಾವುದೇ ಶುಲ್ಕಗಳನ್ನು ಪಡೆಯದಂತೆ ತಡೆಯಬೇಕು.
- ನಮಗೆ ಶಾಲೆಗಳಲ್ಲಿ ನೀಡುವ ಹಾಲು, ಮೊಟ್ಟೆ ಸಹಿತ ಮಧ್ಯಾಹ್ನದ ಬಿಸಿಯೂಟದಲ್ಲಿ ಪೌಷ್ಠಿಕಾಂಶದ ಕೊರತೆಯಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇದು ಪ್ರಾಥಮಿಕದಿಂದ ಪ್ರೌಢ ಶಾಲೆಯವರೆಗೂ ಜಾರಿಯಾಗಬೇಕು.
- ನಾವು ಅನೇಕ ಮಕ್ಕಳು ದೂರದಿಂದ ನಮ್ಮ ಸರ್ಕಾರಿ ಶಾಲೆಗಳಿಗೆ ನಡೆದು ಬರುತ್ತೇವೆ. ಕೆಲವರ ಮನೆಯಲ್ಲಿ ಕಷ್ಟಪಟ್ಟಾದರೂ ವಾಹನ ವ್ಯವಸ್ಥೆ ಮಾಡಿ ಶಾಲೆಗೆ ಕಳುಹಿಸುತ್ತಾರೆ. ಸರ್ಕಾರಿ ಶಾಲೆಗಳಿಗೆ ದೂರದಿಂದ ಬರುವ ಮಕ್ಕಳಿಗೆ ವಾಹನ ವ್ಯವಸ್ಥೆ ಮಾಡಬೇಕು ಅಥವಾ ಅವರ ಪ್ರಯಾಣಕ್ಕೆ ಅನುಕೂಲವಾಗುವಂತೆ ಪ್ರಯಾಣದ ವೆಚ್ಚವನ್ನು ನೀಡಬೇಕು.. ಕೆಲವು ಶಾಲೆಗಳಲ್ಲಿ ನಮ್ಮಿಂದ ಶುಲ್ಕ ಪಡೆದು ವಾಹನ ವ್ಯವಸ್ಥೆ ಮಾಡುತ್ತಾರೆ. ಆದರೆ ಶಿಕ್ಷಣ ನಮ್ಮ ಹಕ್ಕಲ್ಲವೇ? ಶಿಕ್ಷಣ ಪಡೆಯಲು ಬೇಕಾದ ಸೂಕ್ತ ವ್ಯವಸ್ಥೆಯೂ ನಮಗೆ ಕೊಡುವಂತಾಗಬೇಕು
- ನಮಗೆ ಕೋವಿಡ್ ಸಮಯದಲ್ಲಿ ಆನ್‌ಲೈನ್ ಶಿಕ್ಷಣ ಪ್ರಾರಂಭಿಸಿದರು. ಈಗ ಕೋವಿಡ್ ಇಲ್ಲದಿದ್ದರೂ ನೋಟ್ಸ್ ಕಳುಹಿಸುವುದು, ಕೆಲವೊಂದು ಹೆಚ್ಚಿನ ಪಾಠಗಳನ್ನು ಆನ್‌ಲೈನ್ ಮೂಲಕವೇ ಮಾಡುತ್ತಾರೆ. ಆದರೆ, ನಮ್ಮ ಹಳ್ಳಿಗಳಲ್ಲಿ ಮೊಬೈಲ್ ಕರೆ ಮಾಡಲು ನೆಟ್‌ವರ್ಕ್ ವ್ಯವಸ್ಥೆಯೇ ಸರಿಯಾಗಿ ಇಲ್ಲ. ಆನ್‌ಲೈನ್ ಪಾಠ ಓದಲು, ಕಲಿಯಲು ಇಂಟರ್‌ನೆಟ್ ಇಲ್ಲಿಂದ ಸಿಗುತ್ತದೆ? ಹೀಗಾಗಿ ನಮ್ಮ ಹಳ್ಳಿಗಳಿಗೆ ಸೂಕ್ತ ಮೊಬೈಲ್ ನೆಟ್‌ವರ್ಕ್ ವ್ಯವಸ್ಥೆ ಒದಗಿಸಬೇಕು.

***ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಹಕ್ಕೊತ್ತಾಯಗಳು:***

- ನಮಗೆ ತಿಳಿದಿರುವಂತೆ ಕೆಲವು ಮಕ್ಕಳಿಗೆ ಶಾಲಾ ಶಿಕ್ಷಣದಲ್ಲಿ ಆಸಕ್ತಿ ಇರುವುದಿಲ್ಲ. ಕೆಲವರಿಗೆ ಮನೆಯ ಪರಿಸ್ಥಿತಿಯಿಂದಾಗಿ ಶಾಲೆಗೆ ಹೋಗಲು ಆಗುವುದಿಲ್ಲ. ಹೀಗಾಗಿ ಶಾಲೆಗೆ ಹೋಗದೇ ಇರುವ ಮಕ್ಕಳಿಗೆ ಅವರು ಕಲಿಯಲು ಇಚ್ಛಿಸುವ ತರಬೇತಿಗಳನ್ನು ನೀಡುವ ವ್ಯವಸ್ಥೆ ಮಾಡಬೇಕು.
- ಕೆಲವು ಮಕ್ಕಳು ಬಿಡುವಿನ ವೇಳೆಯಲ್ಲಿ ಕೆಲಸ ಮಾಡುತ್ತಾ ಶಾಲೆಗೆ ಹೋಗುತ್ತಾರೆ. ಶಾಲೆಗೆ ಹೋಗುತ್ತಾ ಕೆಲಸಕ್ಕೆ ಹೋಗುವ ಮಕ್ಕಳಿಗೆ ದುಡಿಮೆಯೊಂದಿಗೆ ಸೂಕ್ತವಾದ ಶಿಕ್ಷಣ ಮುಂದುವರಿಸಲು ಅವಕಾಶವನ್ನು ಮಾಡಿಕೊಡಬೇಕು.
- ಮನೆಯಲ್ಲಿ ಕಷ್ಟವಿರುವುದರಿಂದ ಹಾಗೂ ಬೇರೆ ಕಾರಣಗಳಿಂದ ಶಾಲೆಬಿಟ್ಟು ಅಪಾಯಕಾರಿಯಲ್ಲದ ಕೆಲಸ ಮಾಡುತ್ತಿರುವ ಮಕ್ಕಳಿಗೆ ಸರಿಯಾದ ವೇತನ ಹಾಗೂ ಇತರ ಅಗತ್ಯ ಸೌಲಭ್ಯಗಳು ಸಿಗುವಂತಾಗಬೇಕು.

***ಎಲ್ಲಾ ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಹಕ್ಕೊತ್ತಾಯಗಳು:***

- ಗ್ರಾಮ ಪಂಚಾಯತ್‌ಗಳಲ್ಲಿ ನಮ್ಮಂತಹ ಎಲ್ಲಾ ಮಕ್ಕಳಿಗಾಗಿ ಗ್ರಂಥಾಲಯ ವ್ಯವಸ್ಥೆ ಆಗುತ್ತಿರುವುದು ನಮಗೆ ಸಂತೋಷ. ಈ ಗ್ರಂಥಾಲಯಗಳಲ್ಲಿ ಮಕ್ಕಳ ಓದಿಗೆ ಅನುಗುಣವಾದ ಪುಸ್ತಕಗಳು, ಪತ್ರಿಕೆಗಳು ಹೆಚ್ಚು ಇರಬೇಕು. ಡಿಜಿಟಲ್ ಗ್ರಂಥಾಲಯದ ವ್ಯವಸ್ಥೆಯೂ ಇರಬೇಕು. ನಾವು ಹೆಚ್ಚು ಹೆಚ್ಚು ಬೇರೆ ಬೇರೆ ವಿಷಯಗಳನ್ನು ಕಲಿಯಲು, ನಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಈ ಗ್ರಂಥಾಲಯಗಳ ಮೂಲಕ ಅವಕಾಶ ಮಾಡಿಕೊಡಬೇಕು. ಅದಕ್ಕೆ ಸಂಬಂಧಿಸಿದಂತೆ ಕ್ರೀಡೆ, ಸಾಂಸ್ಕೃತಿಕ ಕಲಿಕೆಯೂ ಸೇರಿದಂತೆ ಅಗತ್ಯ ಸಲಕರಣೆಗಳ ವ್ಯವಸ್ಥೆಯನ್ನು ಮಾಡಬೇಕು.
- 12 ವರ್ಷದ ಮೇಲ್ಪಟ್ಟ ಮಕ್ಕಳಿಗೆ, ನಮಗೆ ಅಗತ್ಯವಿರುವ ಕಬ್ಬಿಣದ ಅಂಶದ ಮಾತ್ರೆಗಳು, ಜಂತು ಹುಳು ಮಾತ್ರೆ ಹಾಗೂ ಹೆಣ್ಣು ಮಕ್ಕಳಿಗೆ 'ಶುಚಿ' ಸ್ಯಾನಿಟರಿ ಪ್ಯಾಡ್‌ಗಳನ್ನು ನೀಡಬೇಕು. ಆಗಾಗ ಆರೋಗ್ಯದ ಮಾಹಿತಿ ನೀಡುವ ಕಾರ್ಯಕ್ರಮಗಳು ನಡೆಸಬೇಕು.

- ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ತಿಂಗಳಿಗೊಮ್ಮೆ ಮನೆ-ಮನೆಗೆ ಭೇಟಿ ನೀಡಿ ನಮ್ಮ ಸಾಮಾನ್ಯ ಆರೋಗ್ಯ ತಪಾಸಣೆಯನ್ನು ಮಾಡಬೇಕು.
- ನಮ್ಮ ಕೆಲವು ಹಳ್ಳಿಗಳಲ್ಲಿ ಯಾವುದೇ ಆಸ್ಪತ್ರೆಗಳಿಲ್ಲ. ಹೀಗಾಗಿ ಅಂತಹ ಹಳ್ಳಿಗಳಿಗೆ ಸರ್ಕಾರಿ ಆಸ್ಪತ್ರೆ ಅಥವಾ ಉಪಕೇಂದ್ರ ಬೇಕು. ಇದರಿಂದ ತಾಲೂಕು ಆಸ್ಪತ್ರೆಗೆ ಅಥವಾ ದೂರದ ಆಸ್ಪತ್ರೆಗೆ ಹೋಗುವುದಕ್ಕಿಂತ ಹತ್ತಿರದಲ್ಲಿಯೇ ಚಿಕಿತ್ಸೆ ಸಿಗುತ್ತದೆ.
- ನಮ್ಮ ಹಳ್ಳಿಗಳಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಛತೆಯ ಕೊರತೆಯಿದೆ. ಇಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೂ ಕೂಡ ಪೌಷ್ಠಿಕಾಂಶಯುಕ್ತ ಆಹಾರವನ್ನು ಕೊಡಬೇಕು.
- ನಮ್ಮಲ್ಲಿ ಕೆಲವು ವಿಶೇಷ ಚೇತನ ಇರುವ ಮಕ್ಕಳಿದ್ದಾರೆ. ಅವರಿಗೆ ಅಗತ್ಯವಿರುವ ಶಿಕ್ಷಣ ಮತ್ತು ಇತರ ಎಲ್ಲಾ ವ್ಯವಸ್ಥೆಗಳನ್ನು ಸಕಾಲದಲ್ಲಿ ಸಿಗುವಂತಾಗಬೇಕು.
- ಅಂಗನವಾಡಿಯಲ್ಲಿ ಮಕ್ಕಳಿಗೆ, ಗರ್ಭಿಣಿ, ಬಾಣಂತಿಯರಿಗೆ ನೀಡುವ ಆಹಾರ ನಿಲ್ಲಿಸಿದ್ದಾರೆ. ಹೀಗಾಗಿ ಕಡಿಮೆ ಆಹಾರ ಬರುತ್ತಿದೆ ಎನ್ನುತ್ತಿದ್ದಾರೆ. ಹೀಗಾದರೆ, ಗರ್ಭಿಣಿ, ಬಾಣಂತಿಯರಿಗೆ ಹಾಗೂ ಮಕ್ಕಳಿಗೆ ಪೌಷ್ಠಿಕಾಂಶದ ಕೊರತೆಯ ಸಮಸ್ಯೆ ಕಾಡುತ್ತದೆ. ಅಂಗನವಾಡಿಗಳ ಮೂಲಕ ಕೊಡುತ್ತಿದ್ದ ಆಹಾರ ತಪ್ಪದೇ ಸಮಯಕ್ಕೆ ಸರಿಯಾಗಿ ಸಿಗುವಂತಾಗಬೇಕು.
- ನಮ್ಮ ಜಿಲ್ಲೆ ಉಡುಪಿಯಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಹಲವಾರು ವರ್ಷಗಳ ಹಿಂದೆಯೇ ಕೆಲಸಕ್ಕೆಂದು ವಲಸೆ ಬಂದಿರುವ ಅನೇಕ ಕುಟುಂಬದವರಿಗೆ ಇಲ್ಲಿ ಸರಿಯಾದ ವಸತಿ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಮುಂತಾದ ವ್ಯವಸ್ಥೆಗಳಿಲ್ಲ. ಆ ಕುಟುಂಬದವರ ಅನೇಕ ಮಕ್ಕಳು ನಮ್ಮ ಸ್ನೇಹಿತರು. ಅವರೆಲ್ಲರೂ ಟೆಂಟ್‌ಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಅತೀ ಅಗತ್ಯವಿರುವ ಈ ಎಲ್ಲಾ ವ್ಯವಸ್ಥೆ ಮಾಡಿಕೊಡಬೇಕು.
- ರಾಷ್ಟ್ರೀಯ ಹೆದ್ದಾರಿಯ ವಿವಿಧ ಸರ್ಕಲ್‌ಗಳಲ್ಲಿ ಅಂದರೆ ನಾಲ್ಕು ಕಡೆಗಳಿಂದ ಗಾಡಿ ಬರುವ ಕಡೆ ನಮಗೆ ಮಕ್ಕಳಿಗೆ ದಾಟಲು ತುಂಬಾ ಹೆದರಿಕೆ ಆಗುತ್ತದೆ. ಅಜ್ಜ-ಅಜ್ಜಿಯರೂ ಸಹ ದಾಟುವಾಗ ಕಷ್ಟಪಡುವುದನ್ನು ನೋಡಿದ್ದೇವೆ. ಇಂತಹ ಪ್ರಮುಖ ಸ್ಥಳಗಳಲ್ಲಾದರೂ ಯಾವುದೇ ಅಪಾಯವಿಲ್ಲದೇ ರಸ್ತೆ ದಾಟುವಂತಾಗಲು ಅಗತ್ಯ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.
- ನಮ್ಮ ಅನೇಕ ಹಳ್ಳಿಗಳಲ್ಲಿ ಬೇಸಿಗೆ ಬಂತೆಂದರೆ ನೀರಿನ ಸಮಸ್ಯೆ ಪ್ರಾರಂಭವಾಗುತ್ತದೆ. ವಿದ್ಯುತ್ ಕೂಡ ಸಮಸ್ಯೆ ಕೊಡುತ್ತದೆ. ಹೀಗೆ ನೀರು ಮತ್ತು ವಿದ್ಯುತ್ ಸಮಸ್ಯೆ ಇರುವ ಕಡೆ ತಕ್ಷಣವೇ ಅದನ್ನು ಬಗೆಹರಿಸಬೇಕು. ಹಾಗೂ ಶಾಶ್ವತ ಪರಿಹಾರ ಮಾಡಬೇಕು.
- ನಮ್ಮ ಶಾಲೆ, ಊರು, ಮನೆ, ದಾರಿ, ಬಸ್ ನಿಲ್ದಾಣ ಹೀಗೆ ಎಲ್ಲಾ ಕಡೆಗಳಲ್ಲೂ ಮಕ್ಕಳ ಹಾಗೂ ಮಹಿಳೆಯರ ರಕ್ಷಣೆಗೆ ಪ್ರಮುಖ ಆಧ್ಯತೆ ನೀಡಬೇಕು.
- ನಾವು ನಮ್ಮ ಶಾಲಾ ಶಿಕ್ಷಣ ಮುಗಿಸಿ ಮುಂದಿನ ಶಿಕ್ಷಣಕ್ಕೆ ಹೋಗುತ್ತೇವೆ. ಆದರೆ ಶಾಲೆಗಳಲ್ಲಿ ಮಾತ್ರ ಸಿಗುವ ಉಚಿತ ಶಿಕ್ಷಣ ಬೇರೆ ಹಂತದಲ್ಲಿ ಇಲ್ಲ. ಪದವಿ ಹಾಗೂ ಹೆಚ್ಚಿನ ಶಿಕ್ಷಣ ಪಡೆಯಬೇಕೆಂದರೆ ಹಣ ಬೇಕು, ನಮ್ಮಂತ ಅನೇಕ ಮಕ್ಕಳಿಗೆ ಇದರಿಂದ ಹೆಚ್ಚಿನ ಶಿಕ್ಷಣ ಪಡೆಯುವುದು ಕಷ್ಟ. ಹೀಗಾಗಿ ಶಾಲೆಯ ನಂತರದ ಹೆಚ್ಚಿನ ಯಾವುದೇ ವಿದ್ಯಾಭ್ಯಾಸಕ್ಕೆ ಅಗತ್ಯವಿರುವವರಿಗೆ ಸರ್ಕಾರದಿಂದ ವ್ಯವಸ್ಥೆಗಳನ್ನು ಕಲ್ಪಿಸಬೇಕು.